# ಅಚ್ಚರಿಗಳ ಖನಿ ಲಡಾಖ್

ಒಂದೊಂದು ತಿರುವಿನಲ್ಲೂ ಅಚ್ಚರಿಗಳನ್ನು ಕರುಣಿಸುವ ಲಡಾಖ್‌, ನಿಸರ್ಗದ ಚೆಲುವು, ಭೀಕರತೆಯನ್ನು ಒಟ್ಟೊಟ್ಟಿಗೆ ಎದುರಾಗಿಸುವ ಸ್ಥಳ.

■ ನವೀನ್ ಕುಮಾರ್ ಎನ್‌.




ಲೇಹ್ ಅರಮನೆ

ಹಿಮಚ್ಛಾದಿತ ಗಿರಿಶಿಖರಗಳನ್ನು ತನ್ನೊಡಲಲ್ಲಿಟ್ಟುಕೊಂಡಿರುವ ಲಡಾಖ್, ಸಾಹಸಪ್ರಿಯರ ನೆಚ್ಚಿನ ತಾಣ. ಜೀವಮಾನದಲ್ಲಿ ಒಮ್ಮೆಯಾದರೂ ಅಲ್ಲಿಗೆ ಪ್ರವಾಸ ಹೋಗಬೇಕೆನ್ನುವುದು ಎಷ್ಟೋ ಜನರ ಕನಸು. ಈ ಕಾರಣಕ್ಕಾಗಿ ದುಬಾರಿ ಬೈಕ್ ಸೇರಿದಂತೆ ಅಗತ್ಯ ಪರಿಕರಗಳನ್ನು ಖರೀದಿಸುವುದೂ ಉಂಟು.

ಲೇಹ್ ನಗರದ ವಿಮಾನ ನಿಲ್ದಾಣ ತಲುಪುವ ವೇಳೆಗೆ ಬೆಳಿಗ್ಗೆ ಆರಾಗಿತ್ತು. ಮೋಡಗಳಿಗೆ ಚುಂಬಿಸುತ್ತಿದ್ದ ಗಿರಿಶಿಖರಗಳ ನಡುವೆ ಉದಯಿಸಿದ ಸೂರ್ಯ ನಯನ ಮನೋಹರನಾಗಿದ್ದ. ಕೆಂಬಣ್ಣದ ಕಿರಣಗಳು ಶಿಖರಗಳ ತುದಿ ತಾಗಿ ನಮ್ಮನ್ನು ಸ್ವಾಗತ ಕೋರಿದ ದೃಶ್ಯವನ್ನು ವಿಮಾನದಲ್ಲಿದ್ದಾಗಲೇ ಕಣ್ತುಂಬಿಕೊಂಡೆವು.

ಲೇಹ್‌ನಲ್ಲಿ ಮೊದಲ ದಿನ ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡ ಬಳಿಕವೇ ಮುಂದಿನ ಪ್ರವಾಸ ಕೈಗೊಳ್ಳಲು ಮಾರ್ಗದರ್ಶಿಗಳು ಸಲಹೆ ನೀಡುತ್ತಾರೆ. ಆದರೆ, ನಮಗೆ ಅಂತಹ ಯಾವ ಸಮಸ್ಯೆಯೂ ಕಾಣಿಸಿಕೊಳ್ಳದ ಕಾರಣ ಆ ದಿನವನ್ನು ಉಪಯೋಗಪಡಿಸಿಕೊಳ್ಳಲು ನಿರ್ಧರಿಸಿ ಕಾರನ್ನು ಬಾಡಿಗೆಗೆ ಪಡೆದು ಲೇಹ್–ಶ್ರೀನಗರದ ಹೆದ್ದಾರಿಯಲ್ಲಿ ಪಯಣ ಆರಂಭಿಸಿದೆವು.

ಲೇಹ್‌ನಿಂದ 23 ಕಿ.ಮೀ. ದೂರದಲ್ಲಿರುವ ‘ಪಥರ್ ಸಾಹಿಬ್’ಗೆ ಮೊದಲು ಭೇಟಿ ನೀಡಿದೆವು. ಅಲ್ಲಿಂದ 6 ಕಿ.ಮೀ. ದೂರದಲ್ಲಿದೆ ಸಿಂಧೂ ಮತ್ತು ಝುನ್ಸ್ಕಾರ್ ನದಿಗಳ ಸಂಗಮ. ಮಾನಸ ಸರೋವರದಲ್ಲಿ ಜನ್ಮತಾಳಿ ಬರುವ ಸಿಂಧೂ ಹಾಗೂ ಎದುರು ದಿಕ್ಕಿನಿಂದ ಹರಿದು ಬರುವ ಝುನ್ಸ್ಕಾರ್ ನದಿಗಳ ಸಂಗಮ ನಯನ ಮನೋಹರ. ಸಿಂಧೂ ಶಾಂತಸ್ವರೂಪಿಯಾಗಿ ಹರಿದರೆ, ಝುನ್ಸ್ಕಾರ್ ರಭಸದಿಂದ ಲೀನಗೊಂಡು ಮುಂದೆ ಸಾಗುತ್ತಿತ್ತು.

‘ಪಥರ್ ಸಾಹಿಬ್’ನಿಂದ ಲೇಹ್‌ಗೆ ಹಿಂದಿರುಗುವ ಮಾರ್ಗದಲ್ಲಿ ‘ಮ್ಯಾಗ್ನೆಟಿಕ್ ಹಿಲ್’ (ಕಾಂತೀಯ ಬೆಟ್ಟ) ಸಿಗುತ್ತದೆ. ಇಲ್ಲಿ ವಾಹನ ನಿಲ್ಲಿಸಿದರೆ ಹಿಮ್ಮುಖವಾಗಿ ಚಲಿಸಿದ್ದು ವಿಶೇಷ. ಹಾಗೇ ‘ನೇಮ್ ಆಫ್ ಫೇಮ್’ ಎಂಬ ಭಾರತೀಯ ಸೇನೆಯ ಯುದ್ಧ ಸ್ಮಾರಕ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದೆವು. ಕಾರ್ಗಿಲ್ ಯುದ್ಧದಲ್ಲಿ ಹೋರಾಡಿ ಮಡಿದ ಹುತಾತ್ಮರು, ಅವರ ಉಡುಗೆ–ತೊಡುಗೆ, ಪರಿಕರಗಳು, ಪಾಕಿಸ್ತಾನ ಯೋಧರಿಂದ


ನುಬ್ರಾ ಬಳಿ ಮೂಡಿರುವ ಮರಳು ದಿಬ್ಬಗಳು